

ಡಾ.ಶಿವಕುಮಾರ ಸ್ವಾಮೀಜಿ ಅವರಿಂದ ಜಲಮಲ್ಲನಿಗೆ ಅಭಿನಂದನೆ

# ಜಲಮಲ್ಲ ಏಕಲವ್ಯ

**ಜಲಸ್ತಂಭನ ಎನ್ನುವುದು ಗುರುವಿಲ್ಲದ ವಿದ್ಯೆ. ತಮ್ಮ ಗುರಿ ಸಾಧನೆಯಿಂದ ಲಿಮ್ಕಾ ವಿಶ್ವ ದಾಖಲೆ ನಿರ್ಮಿಸಿದ ಜಲವೀರ ಈ ನಾಗಾನಂದ ಸ್ವಾಮಿ.**

■ ರಾಘು

ಅಲೆ ಅಲೆಯ ಉಂಗುರವನ್ನು ಒಡಮೂಡಿಸುವ ಜೀವ ಜಲ ಅಸಂಖ್ಯ ಸಾಧಕರಿಗೆ ಸ್ಫೂರ್ತಿ. ಯೋಗಿಯೊಬ್ಬ ನೀರಿನ ಮೇಲೆ ಶವಾಸನ ಹಾಕಿ ಮಲಗಿದ್ದಾಗಿದೆ. ನೂರಾರು ಈಜುಗಾರರು ನಿದ್ರೆಯನ್ನೂ ಬಿಟ್ಟು ದಿನಗಟ್ಟಲೆ ಈಜಿದ್ದಾರೆ. ಅಂಗ ಊನವಾಗಿದ್ದರೂ, ಸಾಧನೆಯ ಸಾಗರ ಈಜಿ ಸಾಹಸ ಮೆರೆದಿದ್ದಾರೆ. ನೀರಿನಲ್ಲಿ ವಿವಿಧ ಸ್ಪರ್ಧೆ– ಆಟಗಳನ್ನು ಆಡಿದ್ದೂ ಉಂಟು. ಇದೆಲ್ಲ ಚಲನೆಯ ಸಾಧನೆಯಾದರೆ, ಅದೆಲ್ಲಕ್ಕಿಂತ ಭಿನ್ನವಾಗಿ ಇಲ್ಲೊಬ್ಬರು ನೀರಿನಲ್ಲಿ 'ಸ್ಥಾವರ ಸಾಧನೆ' ಮಾಡಿದ್ದಾರೆ.

ದಿನಗಟ್ಟಲೆ ಅಲುಗಾಡದೆ ನೀರಿನ ಮೇಲೆ ಬಂಡೆಯಂತೆ ಜಡವಾಗಿ ನಿಂತ ಜಾಗದಲ್ಲಿಯೇ ತೇಲುತ್ತಾ ದೇಶ ವಿದೇಶಗಳತ್ತ ತಮ್ಮ ಹೆಸರನ್ನು ತೇಲಿಬಿಟ್ಟಿದ್ದಾರೆ.

ಇವರ ಹೆಸರು ಎಸ್.ಸಿ. ನಾಗಾನಂದಸ್ವಾಮಿ; ಓದಿದ್ದು ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ. ಪ್ರಯೋಗಶಾಲೆಯಲ್ಲಿ ಪ್ರನಾಳದಲ್ಲಿ 'ಜಲ'ವನ್ನು ಬಳಸುತ್ತಿದ್ದ ಅವರು, ಅದೇ ಜಲದಲ್ಲಿ ತಾವೇ ಪ್ರನಾಳವಾಗಿ ಪ್ರಯೋಗಕ್ಕೆ ಅಣಿಗೊಂಡವರು. ಉದ್ಯೋಗಕ್ಕೆ ಸಾಕಷ್ಟು ಅವಕಾಶಗಳಿದ್ದರೂ, ಅದೆಲ್ಲವನ್ನು ಬಿಟ್ಟು ಹಿಡಿದದ್ದು ಈ ಏಕಲವ್ಯ ಮಾರ್ಗ. ಗುರುವಿಲ್ಲದ ವಿದ್ಯೆ. ತಮ್ಮ ಗುರಿಯ ಸಾಧನೆಯಿಂದ ಲಿಮ್ಕಾ ವರ್ಲ್ಡ್ ದಾಖಲೆ ನಿರ್ಮಿಸಿದ ಜಲ ವೀರ.

ಕೃಷಿ ಕುಟುಂಬದಲ್ಲಿ ಜನಿಸಿದ ಸ್ವಾಮಿ, ಬಾಲ್ಯದಲ್ಲಿ ಊರ ಕೆರೆಯಲ್ಲಿ ಸಹಜವಾಗಿ ಈಜು ಕಲಿತರು. ನಂತರ ಈಜಲು ಬಳಸುತ್ತಿದ್ದ ಕೈ ಹಾಗೂ ಬಡಿಯಲು ಬಳಸುವ ಕಾಲುಗಳಿಗೆ ಜಡತ್ವ ತುಂಬಿ ನೀರಿನಲ್ಲಿ ತೇಲುವ ಅಭ್ಯಾಸ ರೂಢಿಸಿಕೊಂಡರು. ಆರಂಭದಲ್ಲಿ ಕೆಲ ಕ್ಷಣ ಮಾಡುತ್ತಿದ್ದ ಈ ಅಂಗ ಸಾಧನೆ ಕ್ರಮೇಣ ಗಂಟೆ ತಲುಪಿ ಈಗ ದಿನಗಟ್ಟಲೆ ಅಲುಗಾಡದೆ ಬಂಡೆಯಂತೆ ನೀರಿನಲ್ಲಿ ತೇಲಬಲ್ಲರು. ಇದನ್ನು ಜಲಸ್ತಂಭನ ಎಂದು ಕರೆಯುತ್ತಾರೆ.

ಇವರ ಜಲಸ್ತಂಭನ ವಿದ್ಯೆ 'ಏಕಲವ್ಯ' ಅಭ್ಯಾಸದಿಂದ ಅರ್ಜಿಸಿರುವಂತದ್ದು, ಸ್ವತಃ ಅವರೇ ಅದರ ಕೌಶಲ್ಯವನ್ನು ಅಭ್ಯಾಸದ ಮೂಲಕ ರೂಢಿಸಿಕೊಂಡಿದ್ದಾರೆ. ಅದು ಹಿಡಿತಕ್ಕೆ ಬಂದ ತಕ್ಷಣ ಅದನ್ನು ಸಾರ್ವಜನಿಕವಾಗಿ ಪ್ರದರ್ಶಿಸ ತೊಡಗಿದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಮೊದಲ ಬಾರಿಗೆ 4 ಗಂಟೆಗಳ ಕಾಲ ಅವರು ಪ್ರದರ್ಶನ ನೀಡಿದ್ದರು. ಆಗ ರಾಜ್ಯ ಯುವಜನ ಸೇವೆ ಮತ್ತು ಕ್ರೀಡಾ ಪ್ರಾಧಿಕಾರ ಒಂದು ಲಕ್ಷ ರೂಪಾಯಿ ನಗದು ನೀಡಿ ಅಭಿನಂದಿಸಿತ್ತು. 2000ನೇ ಸೆಪ್ಟಂಬರ್ ತಿಂಗಳಲ್ಲಿ ದೆಹಲಿಯ ತಾಲ್ಕಟೋರ ಈಜುಕೊಳದಲ್ಲಿ ನಿರಂತರ 22 ಗಂಟೆಗಳ ಕಾಲ ಜಲಸ್ತಂಭನ ಪ್ರದರ್ಶಿಸಿ ವೀಕ್ಷಕರಿಂದ ಅಪಾರ ಮೆಚ್ಚುಗೆ ಗಳಿಸಿದರು. 'ಇವರ ಈ ಸಾಹಸ ಯುವ ಪೀಳಿಗೆಗೆ ಸ್ಫೂರ್ತಿ' ಎಂದು ಕರ್ನಾಟಕದ ರಾಜ್ಯಪಾಲರು ಸ್ವಾತಂತ್ರ್ಯ ದಿನಾಚರಣೆಯಂದು ಪ್ರಶಂಸಾ ಪತ್ರ ನೀಡಿ ಸನ್ಮಾನಿಸಿದರು. ಆ ಪ್ರದರ್ಶನ ಲಿಮ್ಕಾ ವರ್ಲ್ಡ್ ರೆಕಾರ್ಡ್‌ನಲ್ಲಿಯೂ ದಾಖಲಾಯಿತು.

ಆನಂತರ ಅವರು ಜಪಾನ್, ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ ಹಾಗೂ ಜರ್ಮನಿಯಲ್ಲಿ ತಮ್ಮ ತಾಲೀಮು ಪ್ರದರ್ಶಿಸಿ ಕರ್ನಾಟಕವನ್ನು ಮತ್ತೊಂದು ರೀತಿಯಲ್ಲಿ ಪರಿಚಯಿಸಿದ್ದಾರೆ.

ಅಂತರಗಂಗೆಯಂತೆ ನೀರಿನ ಮೇಲೆ ತಲೆ ಮಾತ್ರ ತೇಲುವಂತೆ ಮಾಡಿ ಅಂಗವನ್ನು ಸಂಪೂರ್ಣ ನೀರಿನಲ್ಲಿ ಮುಳುಗಿಸಿ ಯಾವುದೇ ಆಧಾರವಿಲ್ಲದೆ ಭೂಮಿಯಿಂದ ಅಂತರ ಕಾಪಾಡಿಕೊಂಡು ನಿಲ್ಲುವ ನಾಗಾನಂದಸ್ವಾಮಿ ಅಂತರಗಂಗಾ ಸುತ. ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಸುಗ್ಗನಪಾಳ್ಯದಲ್ಲಿ 1.7.1969 ರಲ್ಲಿ ಜನಿಸಿದರು. ಜಲ ತಾಲೀಮಿಗಾಗಿ ತಮ್ಮ ಜೀವನವನ್ನು ಮೀಸಲಿರಿಸಿದ್ದಾರೆ. ಇವರ ಈ ಕಾರ್ಯಕ್ಕೆ ಅನೇಕ ಪುರಸ್ಕಾರಗಳು ಇವರನ್ನು ಹುಡುಕಿ ಬಂದಿವೆ.

ಚಿತ್ರದುರ್ಗದಲ್ಲಿ ಜರುಗಿದ 75ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಇವರನ್ನು ಸನ್ಮಾನಿಸಲಾಗಿದೆ. 2008ರಲ್ಲಿ 'ಅಕ್ಕ'ದ 5ನೇ ವಿಶ್ವ ಕನ್ನಡ ಸಮ್ಮೇಳನದಲ್ಲಿಯೂ ಭಾಗವಹಿಸಿ ಜನ ಮೆಚ್ಚುಗೆಗೆ ಪಾತ್ರವಾಗಿದ್ದಾರೆ. ಭಾರತೀಯ ಕ್ರೀಡಾ ಪ್ರಾಧಿಕಾರ ಕೂಡ ನಾಗಾನಂದರ ನೂತನ ಪ್ರದರ್ಶನ ಅವರನ್ನು ಮುಂದೊಂದು ದಿನ ಅಮೋಘ ಸಾಧಕರನ್ನಾಗಿ ಮಾಡುತ್ತದೆ ಎಂದು ಹೇಳಿದೆ.

'ವೈಶಂಪಾಯನ ಸರೋವರದಲ್ಲಿ ಮುಳುಗಿದ ದುರ್ಯೋಧನ, ಜಲಮಂತ್ರ ಜಪಿಸುತ್ತಾ ಕೂತಿದ್ದ' ಎಂಬ ಮಹಾಭಾರತದ ಕತೆಗೆ ನೈಜ ರೂಪವನ್ನು ಸ್ವಾಮಿ ತುಂಬಿದ್ದಾರೆ. ಅವರ ಈ ಸಾಧನೆಯ ಪ್ರದರ್ಶನಕ್ಕಾಗಿ ವಿವಿಧ ರಾಷ್ಟ್ರಗಳಲ್ಲಿ ತಕ್ಕ ಮನ್ನಣೆಯೂ ದೊರೆತಿದೆ. 'ಜಲಸ್ತಂಭನ ವಿದ್ಯೆಯನ್ನೇ ಇನ್ನೂ ಹೆಚ್ಚಿನ ಅಭ್ಯಾಸ ಹಾಗೂ ತರಬೇತಿ ನೀಡುವ ಉತ್ಸುಕತೆ ನನ್ನ ಮುಂದಿನ ಗುರಿಯಲ್ಲೊಂದು' ಎನ್ನುತ್ತಾರೆ ನಾಗಾನಂದ.

